**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 22.11.2024 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

| | | |
|---|---|---|
| ಹೆಸರು | : | ಶ್ರೀ. ಸತೀಶ್ ಬಿನ್ ಜಗನ್ನಾಥನ್ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಮೆಡಿಕಲ್ ರೆಕಾರ್ಡ್ ಆಫಿಸರ್ |
| ವಾಸ | : | ಹೊಸುರು |

* * * *

ನಾನು ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ.

| | | |
|---|---|---|
| 1 | ಅಧಿಕಾರ ಪತ್ರ | ನಿಡಿ.1 |
| 2 | ಅಪಘಾತದ ವಿವರದ ರಿಜಿಷ್ಟನ ಪ್ರತಿ | ನಿಡಿ.2 |
| 3 | ಪೋಲಿಸರಿಗೆ ನೀಡಿದ ಮಾಹಿತಿ | ನಿಡಿ.3 |

ಕಳೆದ ಎರಡು ವರ್ಷಗಳಿಂದ ಗುಣಂ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಡಿ.2 ರಂತೆ ದಿಃ03.09.2023 ರಲ್ಲಿ ಬೆಳಗಿನ ಜಾವ 3.40 ಕ್ಕೆ ರೋಗಿಯನ್ನು ಕರೆತರಲಾಗಿತ್ತು. ಆ ವ್ಯಕ್ತಿ ಮೃತಪಟ್ಟ ನಂತರ ದೇಹವನ್ನು ಆಸ್ಪತ್ರೆಗೆ ಕರೆ ತರಲಾಗಿತ್ತು. ನಿಡಿ.2 ರ ವಿವರಗಳನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಿಡಿ.2 ರ ಪ್ರಕಾರ ಮೃತ ದೇಹವನ್ನು ನಂದಕುಮಾರ ಎನ್ನುವವರು ತಂದಿದ್ದರು. ನಿಡಿ.2 ರ ಅಪಘಾತದ ವಿವರಗಳನ್ನು ನಮೂದಿಸಿಲ್ಲ. ನಿಡಿ.2 ರಲ್ಲಿ ಅಪಘಾತ ಪಡಿಸಿದೆ ಎಂದು ಹೇಳುವ ವಾಹನದ ವಿವರಗಳು ಇಲ್ಲ. ನಿಡಿ.3 ರಲ್ಲಿ ಅಪಘಾತ, ವಾಹನ ವಿವರಗಳನ್ನು ನಮೂದಿಸಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ.2,3 ರಲ್ಲಿರುವ ವಿಚಾರಗಳ ಖುದ್ದು ಮಾಹಿತಿ ನನಗೆ ಇಲ್ಲ.

**ಪಾಟಿ ಸವಾಲುಃ ಅರ್ಜಿದಾರ ಪರ ವಕೀಲರಿಂದಃ**

ನಿಡಿ.2,3 ರ ವಿವರಗಳನ್ನು ನಾನು ಬರೆದಿಲ್ಲ, ಸಂಬಂಧಪಟ್ಟ ವೈದ್ಯರು ಅವುಗಳನ್ನು

ಬರೆದಿದ್ದಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.